# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ–35 ಅರಮನೆನಗರ, 17ನೇ ಅಡ್ಡರಸ್ತೆ, ಸದಾಶಿವನಗರ, ರಾಮಕೃಷ್ಣ ಹೆಗಡೆ ಸಂಕೀರ್ಣ,
ಮೊದಲನೆ ಮಹಡಿ, ಸದಾಶಿವನಗರ,ಬೆಂಗಳೂರು

ಸಂಖ್ಯೆ: ಸ.ಅ(ಅರಮನೆನಗರೆ)/ವಾರ್ಡ–35/ವಾ.ಕ/ಪಿಆರ್/11/21–22 ದಿನಾಂಕ: 24/2/2022

## ದಿನಾಂಕ: 23/2/2022 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು:

## ಸಭೆಯಲ್ಲಿ ಹಾಜರಿದ್ದವರು:

1. ವಾರ್ಡ್ ಸಮಿತಿ ಸದಸ್ಯರು.
2. ಹಿರಿಯ ಆರೋಗ್ಯ ಪರಿವೀಕ್ಷಕರು
3. ಕಿರಿಯ ಆರೋಗ್ಯ ಪರಿವೀಕ್ಷಕರು
4. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮತ್ತಿಕೆರೆ ಉಪ–ವಿಭಾಗ ಬಿಬಿಎಂಪಿ
5. ಬೆಸ್ಕಾಂ ಅಧಿಕಾರಿಗಳು ಸದಾಶಿವನಗರ
6. ಬಿಡಬ್ಲ್ಯೂಎಸ್ಎಸ್ಬಿ ಅಧಿಕಾರಿಗಳು ಮತ್ತಿಕೆರೆ
7. ಕಂದಾಯ ಅಧಿಕಾರಿಗಳು ಸದಾಶಿವನಗರ
8. ಆರಕ್ಷಕರು (ಕಾನೂನು ಮತ್ತು ಸುವ್ಯವಸ್ಥೆ & ಸಂಚಾರಿ ವಿಭಾಗ)

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಯಾದ ಶ್ರೀಮತಿ ಹರ್ಷಾ ನಾಯಕ್ ರವರು ವಾರ್ಡ್ ಸಮಿತಿಯ ಅಧ್ಯಕ್ಷರಾದ ಶ್ರೀ ಓಂ ಪ್ರಕಾಶ್, ವಾರ್ಡ ನೊಡಲ್ ಅಧಿಕಾರಿ, ಸಮಿತಿ ಸದಸ್ಯರನ್ನು ಹಾಗೂ ಅಧಿಕಾರಿ/ಸಿಬ್ಬಂದಿಗಳನ್ನು ಸ್ವಾಗತಿಸುತ್ತಾ, ಈ ಹಿಂದಿನ ವಾರ್ಡ್ ಸಮಿತಿ ಸಭೆಯ ನಡವಳಿಯನ್ನು ಎಲ್ಲರ ಸಮ್ಮುಖದಲ್ಲಿ ಓದಲಾಗಿ, ಕೈಗೊಂಡಿರುವ ಕ್ರಮದ ಬಗ್ಗೆ ತಿಳಿಸಲಾಯಿತು.

ಮತ್ತು ಸಭೆಗೆ ನಿತ್ಯವೂ ಗೈರು ಹಾಜರಾಗುತ್ತಿದ್ದ ಪಾಲಿಕೆಯ ಇಲೆಟ್ರಿಕಲ್ ಅಧಿಕಾರಿಗಳು, ಪಾರೆಸ್ಟ್ ಅಧಿಕಾರಿಗಳು ಮೇಲೆ ಕ್ರಮ ಕೈಗೊಳ್ಳಲು, ಸದರಿ ಇಲಾಖೆಯ ಮುಖ್ಯಸ್ಥರಿಗೆ ಪತ್ರವನ್ನು ನೀಡಲು ನೋಡೆಲ್ ಅಧಿಕಾರಿಯವರು ತಿಳಿಸಿರುತ್ತಾರೆ.

**ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:**

- ಸದಾಶಿವನಗರದ ಕ್ಲಬ್ ರಸ್ತೆಯ ಪಾದಚಾರಿ ಮರ್ಗದ ಮೇಲೆ ಕಟ್ಟಡದ ಡೆಬ್ರಿಸ್ ಹಾಗೂ ಕಟ್ಟಡದ ಸಾಮಾಗ್ರಿಗಳನ್ನು ಹಾಕಿದ್ದು, ತೆರವುಗೊಳಿಸುವಂತೆ ತಿಳಿಸಲಾಯಿತು______ **ಸಹಾಯಕ ಅಭಿಯಂತರರವರ ಅಗತ್ಯ ಕ್ರಮಕ್ಕಾಗಿ**
- ಬೆಂಗಳೂರು ನೀರು ಸರಬುರಾಜು ಮತ್ತು ಒಳಚರಂಡಿ ನಿಗಮದಿಂದ Manhole ಅಳವಡಿಸುತ್ತಿದ್ದು, ಸರಿಯಾಗಿ ನಿರ್ವಯಿಸಿರುವುದಿಲ್ಲ ಎಂದು ತಿಳಿಸಿ, ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಲಾಯಿತು______**ಸಹಾಯಕ ಅಭಿಯಂತರರು BWSSB ರವರ ಅಗತ್ಯ ಕ್ರಮಕ್ಕಾಗಿ**
- 15ನೇ ಮುಖ್ಯರಸ್ತೆ ಸದಾಶಿವನಗರದಲ್ಲಿ ಅಪಾಯ ಸ್ಥಿತಿಯಲ್ಲಿ ಒಂದು ಮರವಿದ್ದು, ಕೂಡಲೇ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಲಾಯಿತು____ **ಬಿಬಿಎಂಪಿ ಅರಣ್ಯ ಪಶ್ಚಿಮ ವಲಯ ರವರ ಅಗತ್ಯ ಕ್ರಮಕ್ಕಾಗಿ**
- ಪೂಜಾರಿ ಲೇಔಟ್‌ನಲ್ಲಿ ಬೆಂಗಳೂರು ನೀರು ಸರಬುರಾಜು ಮತ್ತು ಒಳಚರಂಡಿ ವಿಭಾಗ ವತಿಯಿಂದ ಪ್ರತಿನಿತ್ಯ ಬಿಡುವ ನೀರಿನಲ್ಲಿ ವ್ಯತೆಯುಂಟಾಗುತ್ತಿರುವ ಬಗ್ಗೆ ತಿಳಿಸಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳಲುವಂತೆ_ತಿಳಿಸಲಾಯಿತು______**ಸಹಾಯಕ ಅಭಿಯಂತರರು BWSSB ರವರ ಅಗತ್ಯ ಕ್ರಮಕ್ಕಾಗಿ**
- ಸದಾಶಿನವಗರದ RWA'S ರವರು ವಿವಿಧ ಇಲಾಖೆಗಳಿಂದ ಕೈಗೊಳ್ಳಲಾಗುವ ಅಭಿವೃದ್ಧಿ ಕಾಮಗಾರಿಯನ್ನು ಸಾರ್ವಜನಿಕರಿಗೆ ಪ್ರಚುರ ಪಡಿಸುವಂತೆ ಕೋರಿರುತ್ತಾರೆ.

ಮು.ತಿ.ನೋ

ಸಾರ್ವಜನಿಕ ಹಿತದೃಷ್ಟಿಯಿಂದ ಅಧಿಕಾರಿಗಳು ಕಾರ್ಯೋನ್ಮುಖವಾಗಿ ಕೆಲಸ ನಿರ್ವಹಿಸಲು ತಿಳಿಸುತ್ತಾ, ಚರ್ಚಿಸಲಾಗಿರುವಂತಹ ವಿಷಯಗಳ ಬಗ್ಗೆ ತ್ವರಿತ ಗತಿಯಲ್ಲಿ ನಿರ್ವಹಿಸಲು ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ನೋಡೆಲ್ ಅಧಿಕಾರಿಯವರ ಅನುಮೋದನೆ ಮೇರೆಗೆ]**

**ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು**
**ವಾರ್ಡ್–35 ಅರಮನೆನಗರ**

**ಪ್ರತಿಯನ್ನು:**

1. ಪೂಜ್ಯ ಮಹಾಪೌರರು ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಪೂಜ್ಯ ಉಪ ಮಹಾಪೌರರು ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ಆಯುಕ್ತರು ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಕಾರ್ಯದರ್ಶಿಗಳು ಕೌನ್ಸಿಲ್ ಕಾರ್ಯಲಯ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
5. ವಾರ್ಡ್ ಸಮಿತಿ ಸದಸ್ಯರು ಬಿಬಿಎಂಪಿ ರವರ ಅವಗಾಹನೆಗಾಗಿ ಮಂಡಿಸಿದೆ.
6. ಮಾನ್ಯ ಜಂಟಿ/ಉಪ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
7. ಮಾನ್ಯ ಕಂದಾಯ ಅಧಿಕಾರಿ(ಮಲ್ಲೇಶ್ವರಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
8. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ವಿದ್ಯುತ್/ತೋಟಗಾರಿಕೆ/ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರ ಅವಗಾಹನೆಗಾಗಿ ಮಂಡಿಸಿದೆ.
9. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ಮತ್ತಿಕೆರೆ) ಉಪ ವಿಭಾಗ ರವರ ಅವಗಾಹನೆಗಾಗಿ ಮಂಡಿಸಿದೆ.
10. ಸಹಾಯಕ ಕಂದಾಯ ಅಧಿಕಾರಿ(ಕಲ್ಯಾಣ–ಪಶ್ಚಿಮ) ರವರ ಅವಗಾಹನೆಗಾಗಿ ಮಂಡಿಸಿದೆ.
11. ಕಛೇರಿ ಕಡತಕ್ಕೆ.

ಮು.ತಿ.ನೋ